ಅನುಬಂಧ - (1)

ಆ) ಕರ್ನಾಟಕ ಬಾಡಿಗೆ ನಿಯಂತ್ರಣ (ತಿದ್ದುಪಡಿ) ವಿಧೇಯಕ, 1998.

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ಸಚಿವರು):- (ಮುಖ್ಯಮಂತ್ರಿಗಳ ಪರವಾಗಿ) ಮಾನ್ಯ ಅಧ್ಯಕ್ಷರೆ, ಕರ್ನಾಟಕ ಬಾಡಿಗೆ ನಿಯಂತ್ರಣ (ತಿದ್ದುಪಡಿ) ವಿಧೇಯಕ, 1998. ಅನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ,

"ಕರ್ನಾಟಕ ಬಾಡಿಗೆ ನಿಯಂತ್ರಣ (ತಿದ್ದುಪಡಿ) ವಿಧೇಯಕ, 1998" ಅನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎಂ.ಸಿ. ನಾಣಯ್ಯ (ಸಭಾನಾಯಕರು):- ಮಾನ್ಯ ಅಧ್ಯಕ್ಷರೆ, ಕರ್ನಾಟಕ ಬಾಡಿಗೆ ನಿಯಂತ್ರಣ (ತಿದ್ದುಪಡಿ) ವಿಧೇಯಕ, 1998 ಅನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು *ವಿಧೇಯಕವನ್ನು ಮಂಡಿಸಲಾಗಿದೆ.* (ಅನುಬಂಧ - 2)

3 ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಅ ಪರಿಸರವಾದಿ ಡಾ: ಕುಸುಮಾ ಸೊರಬ್‌ರವರು ವಾಹನ ಅಪಘಾತದಲ್ಲಿ ಅಸು ನೀಗಿದ ಬಗ್ಗೆ.

+ಶ್ರೀ ಕೆ. ವಿಶ್ವೇಶ್ವರ ಹೆಗಡೆ (ಅಂಕೋಲಾ):- ಮಾನ್ಯ ಅಧ್ಯಕ್ಷರೆ, ಬಹಳ ದು:ಖದ ವಿಷಯವನ್ನು ಈ ಸದನದಲ್ಲಿ ಇಂದು ಪ್ರಸ್ತಾಪಿಸುವ ಅವಕಾಶ ಒದಗಿಬಂದಿದೆ. 14ನೇ ತಾರೀಖು ನಡೆದ ಒಂದು ದುರ್ಘಟನೆಯಲ್ಲಿ ಖ್ಯಾತ ಪರಿಸರವಾದಿ, ಮತ್ತು ಸಾಮಾಜಿಕ ಕೆಲಸಗಳಲ್ಲಿ ತಮ್ಮನ್ನು ತಾವೇ ತೊಡಗಿಸಿಕೊಂಡು, ಕೇವಲ ಉತ್ತರ ಕನ್ನಡ, ಪಶ್ಚಿಮ ಭಾಗಕ್ಕೆ ಸೀಮಿತವಾಗಿರದೇ ಇಡೀ ರಾಜ್ಯಕ್ಕೆ ಪರಿಸರದ ಹೋರಾಟದಲ್ಲಿ ತಮ್ಮ ವ್ಯಕ್ತಿತ್ವವನ್ನು ತೋರಿಸಿಕೊಟ್ಟಂಥ ಡಾ: ಕುಸುಮಾ ಸೊರಬ್‌ರವರು ರಸ್ತೆಯ ಅಪಘಾತದಲ್ಲಿ ಮೃತರಾದರು. ಇಲ್ಲಿ ಏಕೆ ಈ ವಿಷಯವನ್ನು ಪ್ರಸ್ತಾಪಿಸಿದೆ ಎಂದರೆ ಇಲ್ಲಿ ಮುಖ್ಯವಾಗಿ ಎರಡು ಅಂಶಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಮೊದಲನೆಯದಾಗಿ ಡಾ: ಕುಸುಮ ಸೊರಬ್ ಅವರು, ಶೈಕ್ಷಣಿಕ, ಸಾಮಾಜಿಕ, ಪರಿಸರದ ಹೋರಾಟ ಹೀಗೆ ಅನೇಕ ಆಂಧೋಲನದಲ್ಲಿ ತಮ್ಮನ್ನು ತಾವೇ ಅರ್ಪಿಸಿಕೊಂಡಿದ್ದರು. ಇದರ ಜೊತೆಗೆ ಒಂದು "ಸ್ನೇಹ ಕುಂಜ" ಎನ್ನುವ ಟ್ರಸ್ಟ್‌ನ್ನು ನಿರ್ಮಿಸಿದರು. ಹಾಗೂ ವಿವೇಕಾನಂದ ಆರೋಗ್ಯ ಧಾಮ, ಇತ್ಯಾದಿಗಳ ಚಟುವಟಿಕೆಯಲ್ಲಿ ಬಡವರಿಗೆ, ದಾರಿದೀಪವಾಗಿದ್ದರು. ಕಷ್ಟದಿಂದಲೇ ಅವರು ನರ್ಸ್ ಆಗಿ, ಎಂಬಿಬಿಎಸ್ ಶಿಕ್ಷಣ ಮುಗಿಸಿ, ಎಂಎನ್ ಶಿಕ್ಷಣ ಓದಿ ಸಾಮಾನ್ಯ ಜನಗಳ ಕಷ್ಟ ಸುಖಗಳನ್ನು ಅರಿತು ಅವರ ಧ್ವನಿಯಾಗಿ ಸ್ಪಂದಿಸುತ್ತಿದ್ದರು. ವಿಶೇಷವಾಗಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಅವರು ಇಡೀ ಜಿಲ್ಲೆಯಲ್ಲೆ ಮನೆಮಾತಾಗಿದ್ದರು. ಅವರು ತಮ್ಮ 61ನೇ ಇಳಿವಯಸ್ಸಿನಲ್ಲಿ ಪರಿಸರದ ಒಂದು ವಿಷಯಕೋಸ್ಕರವಾಗಿಯೇ ಬೆಂಗಳೂರಿಗೆ ಬಂದು ಇಲ್ಲಿನ ವಕೀಲರನ್ನು, ತಜ್ಞರನ್ನು ಭೇಟಿ ಮಾಡಿ, ಪರಿಸರದ ಹೋರಾಟಕ್ಕೆ ಇನ್ನಷ್ಟು ಕಾಳಜಿಯನ್ನು ಕೊಡಬೇಕೆಂದು ಇಲ್ಲಿಗೆ ಬಂದಿದ್ದರು. (ಮುಂದು) ಅವರು ಬಂದು ವಾಪಸ್ಸು ಹೋಗತಕ್ಕಂಥ

ಸಂದರ್ಭದಲ್ಲಿ ಒಂದು ದುರಂತ ಸನ್ನಿವೇಶ ಬಂತು. ಈ ಸಂದರ್ಭದಲ್ಲಿ ಸರ್ಕಾರದಲ್ಲಿ ನನ್ನ ವಿನಂತಿ ಎರಡು ಇದೆ. ಮೊದಲನೇ ಭಾಗ. ಈ ರೀತಿಯ ಹೋರಾಟವನ್ನು ಮಾಡುತ್ತಿದ್ದಂಥ ಕುಸುಮಕ್ಕನನ್ನು ನಾವೇನು ಕಳೆದುಕೊಂಡಿದ್ದೇವೆ, ಪರಿಸರ ದೃಷ್ಟಿಯಿಂದ ಸರ್ಕಾರ ಅದು ಶರಾವತಿ ಟೇಲ್‌ರೇಸ್ ಇರಬಹುದು, ಅಥವಾ ಬೇಡ್ತಿ ಹರಿಯುವ ನೀರಿನ ಯೋಜನೆ ಇರಬಹುದು, ಇತ್ಯಾದಿ ಅನೇಕ ಸಂಗತಿಗಳನ್ನು ಕುಸುಮಕ್ಕ ಏನು ವಿರೋಧಿಸುತ್ತಿದ್ದರೋ, ಸರ್ಕಾರ ಇಂತಹ ಒಬ್ಬ ಪರಿಸರ ಹೋರಾಟ ಗಾರ್ತಿಯ ಆತ್ಮಕ್ಕೆ ಶಾಂತಿ ಸಿಗುವ ದೃಷ್ಟಿಯಿಂದ ಈರೀತಿ ಪರಿಸರ ವಿರೋಧಿಯಾದಂಥ ಯೋಜನೆಗಳನ್ನು ಕೈಬಿಡಬೇಕು ಎನ್ನುವ ಒಂದು ಸಂಗತಿಯನ್ನು ಈ ಸಂದರ್ಭದಲ್ಲಿ ಪ್ರಸ್ತಾವನೆ ಮಾಡುತ್ತ, "ಸ್ನೇಹಕುಂಜ" ಎನ್ನುವ ಅವರ ಟ್ರಸ್ಟ್ ಏನಿದೆ, ಅದಕ್ಕೆ ಸರ್ಕಾರದಿಂದ ಧನಸಹಯಾ ಇತ್ಯಾದಿ ಸಹಾಯವನ್ನು ಮಾಡಲಿಕ್ಕೆ ಮುಂದಾಗಬೇಕು ಎನ್ನುವಂಥ ವಿನಂತಿಯನ್ನು ಸಹ ಮಾಡಿಕೊಂಡು ಮತ್ತೊಂದು ವಿನಂತಿ ಏನೆಂದರೆ, ಅವರ ಜೊತೆಗೆ ಯಾರು ಒಡನಾಟವನ್ನು ಮಾಡಿದ್ದಾರೋ, ಅವರೆಲ್ಲರ ಅನುಭವವನ್ನು ಒಂದು ಸಂಗ್ರಹ ಮಾಡಿ ಡಾ: ಕುಸುಮಕ್ಕ ಅವರ ಜೀವನದ ಬಗ್ಗೆ ಒಂದು ಪುಸ್ತಕವನ್ನು ಹೊರತರಬೇಕು ಎನ್ನುವ ಪ್ರಸ್ತಾಪವನ್ನು ಮಾಡುತ್ತಾ, ಈ ದುರಂತ ಹೇಗೆ ಆಯಿತು ಎನ್ನುವಂಥಾದ್ದು ಈ ಸಂದರ್ಭದಲ್ಲಿ ಮುಖ್ಯವಾಗಿ ಪ್ರಸ್ತಾಪಿಸಬೇಕಾಗದಂಥಾದ್ದು. ರಾಷ್ಟ್ರೀಯ ಹೆದ್ದಾರಿ (4) ರಲ್ಲಿ ಅವರು ಹುಬ್ಬಳ್ಳಿಗೆ ಬಸ್‌ನಲ್ಲಿ ಪ್ರಯಾಣ ಮಾಡುತ್ತಿರುವಾಗ ಹಿರಿಯೂರು ಬಳಿ ಒಂದು ಹೋಟೆಲ್ ಹತ್ತಿರ ಈ ಬಸ್‌ನ್ನು ನಿಲ್ಲಿಸಿದಾಗ ಅಲ್ಲಿ ಮೂತ್ರಾಲಯ ವ್ಯವಸ್ಥೆ ಇಲ್ಲದೇ ಇರುವ ಕಾರಣದಿಂದ, ಮತ್ತು ಅವರು ಮಹಿಳೆಯಾಗಿದ್ದ ಕಾರಣದಿಂದ ರಸ್ತೆಯನ್ನು ಧಾಟಿ ಮತ್ತೊಂದು ಕಡೆಗೆ ಹೋಗಬೇಕಾಗಿ ಬಂತು. ಅವರು ರಸ್ತೆಯನ್ನು ದಾಟ್ಟುತ್ತಿದ್ದಂಥ ಸಂದರ್ಭದಲ್ಲಿ ಒಂದು ವಾಹನ ಬಂದು ಈ ದುರಂತ ಸನ್ನಿವೇಶ ಉಂಟಾಯಿತು. ನಾನು ಈ ಸಂದರ್ಭದಲ್ಲಿ ಸರ್ಕಾರವನ್ನು ಆಗ್ರಹಪೂರ್ವಕವಾಗಿ ವಿನಂತಿಸಿಕೊಳ್ಳುವುದು ಇಷ್ಟೆ. ಈ ರೀತಿ ಬಸ್ಸನ್ನು ಅದು ಸರ್ಕಾರಿ ಬಸ್ ಆಗಲಿ, ಖಾಸಗಿ ಬಸ್ ಆಗಲಿ, ನಲ್ಲಿ ಶೌಚಾಲಯದ ವ್ಯವಸ್ಥೆ ಇಲ್ಲವೋ, ಅಲ್ಲಿ ಬಸ್ಸುಗಳನ್ನು ನಿಲ್ಲಿಸುವುದಕ್ಕೆ ಹಗಲು-ರಾತ್ರಿ ಎಲ್ಲಾ ಅವಕಾಶವನ್ನು ಕೊಡಬಾರದು. ಈ ಅವಕಾಶ ಇರುವುದರಿಂದ ಅನೇಕ ದುರ್ಘಟನೆಗಳು ನಡೆದಿವೆ. ಹಾಗಾಗಿ ಇಂಥ ಘಟನೆಗೆ ಅವಕಾಶವನ್ನು ಕೊಡಬಾರದು ಎನ್ನುವುದು, ಮೊದಲನೇಯದು. ಇನ್ನು ಎರಡನೇಯದಾಗಿ ಸೂಕ್ತ ಪಾರ್ಕಿಂಗ್ ವ್ಯವಸ್ಥೆ ಇರಬೇಕಾಗುತ್ತದೆ ಎನ್ನುವ ಸಂಗತಿಯನ್ನು ಸರ್ಕಾರ ಗಮನಿಸಬೇಕು. ಪಾರ್ಕಿಂಗ್ ವ್ಯವಸ್ಥೆ ಇಲ್ಲದೇ ಇರುವ ಕಡೆ ಹೈವೇನಲ್ಲಿ ಬಸ್‌ನ್ನು ನಿಲ್ಲಿಸುತ್ತಾರೆ. ನಾನು ರಾತ್ರಿವೇಳೆಯಲ್ಲಿ ಬಸ್ಸಿನಲ್ಲಿ ಪ್ರವಾಸ ಮಾಡುವಂಥವನು. ನಾವು ಅಲ್ಲಿ ನಮ್ಮ ಶೌಚವ್ಯವಸ್ಥೆಯನ್ನು ಮಾಡಿಕೊಳ್ಳುವುದು ಹೇಗೆ? ಪುರುಷರು ನಾವು ಹೇಗಾದರೂ ಮಾಡಿಕೊಳ್ಳಬಹುದು. ಆದರೆ ಮಹಿಳೆಯರು ಅಂತಹ ಸಂದರ್ಭದಲ್ಲಿ ಬಹಳ ಕಷ್ಟ ಅನುಭವಿಸಬೇಕಾಗುತ್ತದೆ. ಆದ್ದರಿಂದ ಪಾರ್ಕಿಂಗ್ ವ್ಯವಸ್ಥೆ ಇಲ್ಲದೇ ಇರುವ ಕಡೆಯಲ್ಲಿ ಬಸ್ಸು ನಿಲ್ಲಿಸುವುದನ್ನು ತಕ್ಷಣದಲ್ಲಿ ನಿಲ್ಲಿಸಬೇಕು. ಮತ್ತು ಶೌಚಾಲಯ ವ್ಯವಸ್ಥೆ ಇರುವ ಕಡೆಯಲ್ಲೇ ಬಸ್ಸುಗಳನ್ನು ನಿಲ್ಲಿಸಬೇಕು. ಇದನ್ನು ಕಡ್ಡಾಯ ಮಾಡಬೇಕು. ಇದನ್ನು ಯಾರು ಮಾಡುವುದಿಲ್ಲವೋ, ಅಂತಹ ಡ್ರೈವರ್ಸ್ ಕಂಡಕ್ಟರ್ಸ್ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಬೇಕು. ಅವರ ಮೇಲೆ ಕಂಪ್ಲೇಂಟ್ ಲಾಡ್ಜ್ ಮಾಡಬೇಕು. ಅಷ್ಟೇ ಅಲ್ಲ, ಆ ರೀತಿ ಇರುವ ಹೋಟೆಲ್‌ಗಳ ಲೈಸೆನ್ಸ್‌ನ್ನು ಕ್ಯಾನ್ಸಲ್ ಮಾಡಿ, ರೀತಿ ಹೋಟೆಲ್‌ಗಳನ್ನು ಅಲ್ಲಿ ನಡೆಸುವುದಕ್ಕೆ ಅವಕಾಶ ಕೊಡಬಾರದು. ಈ ರೀತಿ ಅವಕಾಶ ಕೊಟ್ಟಿರುವುದರಿಂದ ಇಂತಹ ದುರ್ಘಟನೆಗಳು ನಡೆದಿವೆ. ವಿಶೇಷವಾಗಿ ಸಾರಿಗೆ ಸಚಿವರಾದ ಶ್ರೀ ಸಿಂಧ್ಯರವರು ಇಲ್ಲಿ ಇದ್ದಾರೆ.